ಕೆ.ಸಿ.ಡಿ.
# ಸಮಾಚಾರ
ಬದುಕಿನ ಹಾದಿಯಲ್ಲಿ ಬರವಣಿಗೆಯ ತೋರಣ

ಶಿಕ್ಷಣ-ಸಂಸ್ಕೃತಿ-ಸಮಾಜ
ನಮ್ಮ ಧ್ಯೇಯ, ನಿಷ್ಠೆ

KCD JOURNALISM CLUB DHARWAD

1917-2017
100 Years of Excellence in Education

ಕರ್ನಾಟಕ ಕಾಲೇಜು ಧಾರವಾಡ. ಬಿ.ಎ. ಪತ್ರಿಕೋದ್ಯಮ ವಿದ್ಯಾರ್ಥಿಗಳ ವಾರ ಪತ್ರಿಕೆ. ಸಂಚಿಕೆ: 7 ಸಂಪುಟ: 2 ಪುಟ: 1

## ಕರ್ನಾಟಕ ಕಲಾ ಮಹಾವಿದ್ಯಾಲಯದಲ್ಲಿ 68ನೇ ಗಣರಾಜ್ಯೋತ್ಸವ ಆಚರಣೆ
### ವಿಶ್ವದ ಗಮನ ಸೆಳೆಯುತ್ತಿರುವ ಭಾರತ: ಡಾ.ಎಸ್.ಎಸ್.ಕಟ್ಟಿಮನಿ

ಭಾರತೀಯ ಸಂವಿಧಾನವು ಭಾರತದ ಪ್ರಜಾತಾಂತ್ರಿಕ ವ್ಯವಸ್ಥೆಯಲ್ಲಿ ಮಹತ್ವವಾದ ಪಾತ್ರ ವಹಿಸಿದೆ. ಆದ್ದರಿಂದ ಇಂದು 128 ಕೋಟಿ ಭಾರತೀಯರ ಹಕ್ಕು ಮತ್ತು ಆಶೋತ್ತರಗಳನ್ನು ಇಡೇರಿಸುವ ಒಂದು ಕಲ್ಪವೃಕ್ಷವಾಗಿದೆ ಎಂದು ಕರ್ನಾಟಕ ಕಲಾ ಮಹಾವಿದ್ಯಾಲಯದ ಪ್ರಾಚಾರ್ಯರಾದ ಡಾ. ಸುಭಾಷ್. ಎಸ್. ಕಟ್ಟಿಮನಿ ಅಭಿಪ್ರಾಯಪಟ್ಟರು. ಅವರು ಕರ್ನಾಟಕ ಮಹಾವಿದ್ಯಾಲಯದ ಮುಂಭಾಗದಲ್ಲಿ 68ನೇ ಗಣರಾಜ್ಯೋತ್ಸವದ ಪ್ರಯುಕ್ತ ಧ್ವಜಾರೋಹಣ ನೆರವೇರಿಸಿ ವಿದ್ಯಾರ್ಥಿಗಳನ್ನು ಉದ್ದೇಶಿಸಿ ಮಾತನಾಡುತ್ತಿದ್ದರು.




ಕರ್ನಾಟಕ ಕಲಾ ಮಹಾವಿದ್ಯಾಲಯದ ಪ್ರಾಚಾರ್ಯರಾದ ಡಾ. ಸುಭಾಷ್. ಎಸ್. ಕಟ್ಟಿಮನಿ ಧ್ವಜಾರೋಹಣ ನೆರವೇರಿಸುತ್ತಿರುವದು ಹಾಗೂ ವಿದ್ಯಾರ್ಥಿಗಳನ್ನು ಉದ್ದೇಶಿಸಿ ಮಾತನಾಡುತ್ತಿರುವದು. . ಎನ್. ಎಸ್. ಎಸ್. ಅಧಿಕಾರಿ ಡಾ. ಬಿ ಎಸ್ ಭಜಂತ್ರಿ ಮತ್ತು ಎನ್. ಸಿ. ಸಿ. ಅಧಿಕಾರಿ ಮೇಜರ್ ಡಾ. ವಾಯ್. ಎಸ್. ರಾವುತ್, ಪ್ರಾಧ್ಯಾಪಕ ವೃಂದ ಹಾಗೂ ರಜಪೂತ್ ರೆಜಮೇಂಟ್‌ನ ಸೈನಾಧಿಕಾರಿಗಳನ್ನು ಚಿತ್ರದಲ್ಲಿ ಇದ್ದಾರೆ.

ಭಾರತ ದೇಶವು ಇಂದು ಜಗತ್ತಿನಲ್ಲಿ ಎಲ್ಲ ರಾಷ್ಟ್ರಗಳನ್ನು ಗಮನ ಸೆಳೆಯುವಂತೆ ಎಲ್ಲಾ ರಂಗಗಳಲ್ಲಿ ಮುಂಚೂಣಿಯಲ್ಲಿದ್ದು, ಇಂದು ಬಾಹ್ಯಾಕಾಶ, ಅನ್ವೇಷಣೆ, ವಿಜ್ಞಾನ ಮತ್ತು ತಂತ್ರಜ್ಞಾನದಲ್ಲಿ ಅಭಿವೃದ್ದಿ ಹೀಗೆ ತನ್ನ ಸಾಮರ್ಥ್ಯವನ್ನು ವಿಶ್ವ ಸಮುದಾಯಕ್ಕೆ ಬಿಂಬಿಸುವಂತೆ ಮಾಡಿದೆ ಎಂದರು. ಭಾರತವು ಅಭಿವೃದ್ದಿ ಹೊಂದುತ್ತಿರುವ ರಾಷ್ಟ್ರದಲ್ಲಿ ಇಂದಿಗೂ ಬಡವ ಶ್ರೀಮಂತರ ನಡುವೆ ಅಂತರ ಹೆಚ್ಚಾಗುತ್ತಿದೆ ಎಂದ ಅವರು ಒಂದು ಸಮಿಕ್ಷೆಯ ಪ್ರಕಾರ ಭಾರತದ 58 ರಷ್ಟು ಸಂಪತ್ತು ಕೇವಲ 11 ಪ್ರತಿಶತ ಜನರಲ್ಲಿದೆ ಆದರೂ ಇದು ಪ್ರಶ್ನಾತೀತವಾಗಿ ಉಳಿದಿದೆ ಎಂದು ವಿಶ್ಲೇಷಿಸಿದರು. ಅವರು ಇಂದು ಸರಕಾರವು ಅನೇಕ ಜನಪರ ಯೋಜನೆಗಳುನ್ನು ಜಾರಿಗೆ ತಂದಿದ್ದು, ಅವುಗಳಲ್ಲಿ ಪ್ರಮುಖವಾದ ಮೇಕ್ ಇನ್ ಇಂಡಿಯಾ, ಪ್ರಧಾನ ಮಂತ್ರಿ ಕೌಶಲ್ಯ ವಿಕಾಸ ಯೋಜನೆ, ಡಿಜಿಟಲ್ ಇಂಡಿಯಾ, ಸ್ಟಾರ್ಟಅಪ್, ಮತ್ತು ಉತ್ಪದನಾ, ಸೇವಾ ಹಾಗೂ ತಯಾರಿಕಾ ವಲಯಗಳಿಂದ ದೇಶದ ಅಭಿವೃದ್ದಿಗೆ ಪೂರಕವಾದ ಯೋಜನೆಗಳನ್ನು ರೂಪಿಸಲಾಗಿದೆ ಎಂದರು. ಭಾರತದಂತಹ ದೇಶದಲ್ಲಿ ಯುವಜನರ ಪಾತ್ರ ಬಹಳ ಪ್ರಮುಖವಾಗಿದ್ದು, ಎಲ್ಲಾ ಕ್ಷೇತ್ರಗಳಲ್ಲಿ ವಿದ್ಯಾರ್ಥಿಗಳು ದೇಶದ ಅಭಿವೃದ್ದಿ ಪೂರಕವಾಗಿ ಸಹಕರಿಸಲು ನಿಮ್ಮಲ್ಲಿರುವ ಅನ್ವೇಷಣಾ ಗುಣಗಳನ್ನು ಬೆಳಸಿಕೊಳ್ಳಬೇಕು ಎಂದರು.

ಕಾಲೇಜಿನ ಎನ್.ಸಿ.ಸಿ ಮತ್ತು ಎನ್.ಎಸ್.ಎಸ್ ಕೆಡೇಟ್‌ಗಳು ರಾಷ್ಟ್ರ ಧ್ವಜಕ್ಕೆ ಗೌರವವಂದನೆ ಸಲ್ಲಿಸಿದರು. ಈ ಸಂದರ್ಭದಲ್ಲಿ ಮಹಾವಿದ್ಯಾಲಯದ ಎನ್. ಎಸ್. ಎಸ್. ಅಧಿಕಾರಿ ಡಾ.ಬಿ.ಎಸ್ ಭಜಂತ್ರಿ ಎನ್.ಸಿ.ಸಿ. ಅಧಿಕಾರಿ ಡಾ. ಮೇಜರ್ ವಾಯ್. ಎಸ್. ರಾವುತ್ ಪ್ರಾಧ್ಯಾಪಕರಾದ ಡಾ. ಅರುಣಾ ಹಳ್ಳಿಕೇರಿ, ಡಾ. ಶಾರದಾ, ಡಾ. ಅಮೃತ್ ಯಾರ್ದಿ, ಡಾ ಡಿ.ಬಿ ಕರಡೋಣಿ, ಡಾ. ಮುಕುಂದ ಲಮಾಣಿ ಡಾ. ಹುಲ್ಲಣ್ಣನ್ನವರ್ ಡಾ. ಎನ್. ಸಿ. ಕುರಹಟ್ಟಿ ಡಾ. ಜಾಧವ್ ಡಾ. ಸ್ಟೇಲ್ಲಾ ಸ್ಟಿವನ್ ಇತರ ಶಿಕ್ಷಕ ಮತ್ತು ಶಿಕ್ಷೇತರ ಸಿಬ್ಬಂದಿ ಹಾಜರಿದ್ದರು.

–ನಿತಿನ್(2 ನೇ ಸೆಮಿಸ್ಟರ್)

## "ಕಾನೂನು ಸಾಕ್ಷರತಾ ಕಾರ್ಯಕ್ರಮ ಉದ್ಘಾಟನೆ"
### ಕರ್ನಾಟಕ ಕಲಾ ಮಹಾವಿದ್ಯಾಲಯದಲ್ಲಿ ವಿವೇಕಾನಂದರ ಜನ್ಮದಿನೋತ್ಸವ

ಯುವ ಸಮುದಾಯದಲ್ಲಿ ವಯೋಸಹಜವಾಗಿ ಆಕರ್ಷಣೆಗಳು ಉಂಟಾಗುತ್ತವೆ. ಇದು ನಿಸರ್ಗ ಸಹಜವಾದುದು. ಆದರೆ, ಅವು ಕ್ಷಣಿಕವಾಗಿರುತ್ತವೆ ಎಂದು ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶ ವಿ. ಶ್ರೀಶಾನಂದ ಹೇಳಿದರು.

ನಗರದ ಕರ್ನಾಟಕ ಕಲಾ ಮಹಾವಿದ್ಯಾಲಯದಲ್ಲಿ ರಾಷ್ಟ್ರೀಯ ಯುವ ದಿನಾಚರಣೆ ನಿಮಿತ್ತ ನಡೆದ ಕಾನೂನು ಸಾಕ್ಷರತಾ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿ, ವಯೋಸಹಜವಾಗಿ ಬರುವ ಆಕರ್ಷಣೆಗಳನ್ನು ನಮ್ಮ ಅಧೀನದಲ್ಲಿರಿಸಿಕೊಂಡು ಮುಂದೆ ಸಾಗಿದಾಗ ವ್ಯಕ್ತಿಗತ ಮತ್ತು ದೇಶದ ಭವಿಷ್ಯ ರೂಪಿಸಲು ಸಾಧ್ಯವಿದೆ. ಈ ನಿಟ್ಟಿನಲ್ಲಿ ಸ್ವಾಮಿ ವಿವೇಕಾನಂದರು ಸಾಗಿದ ಹಾದಿ ನಮಗೆ ಆದರ್ಶಪ್ರಿಯವಾಗಿದೆ ಎಂದರು.

ಬಾರತೀಯರು ಹುಟ್ಟಿನಿಂದಲೇ ನಮ್ಮ ಗುಣ, ಚಾರಿತ್ರ್ಯಗಳಿಂದ ಕೂಡಿದ ವ್ಯಕಿತ್ವ ರೂಪಿಸಿಕೊಂಡಿರುತ್ತೇವೆ.




ಕರ್ನಾಟಕ ಕಲಾ ಮಹಾವಿದ್ಯಾಲಯದಲ್ಲಿ ದಾರವಾಡ ಜಿಲ್ಲಾ ಪ್ರಧಾನ ನ್ಯಾಯಾಧೀಶ ವಿ.ಶ್ರೀಶಾನಂದರವರು ಕಾನೂನು ಸಾಕ್ಷರತಾ ಕಾರ್ಯಕ್ರಮವನ್ನು ಉದ್ಘಾಟಿಸಿತ್ತಿರುವುದು.

ಬಾಹ್ಯ ಸೌಂದರ್ಯ ಮತ್ತು ನೋಟಗಳಿಂದ ವ್ಯಕ್ತಿತ್ವ ಅಳೆಯುವ ಅಗತ್ಯವಿಲ್ಲ ಎಂಬ ಸ್ವಾಭಿಮಾನವನ್ನು ಸ್ವಾಮಿವಿವೇಕಾನಂದರು ಜಗತ್ತಿನೆದರು ಹೆಮ್ಮೆಯಿಂದ ಸಾರಿದರು. ಚಿಕಾಗೋ ಸರ್ವಧರ್ಮ ಸಮಾವೇಶದಲ್ಲಿ ಸಹೋದರ, ಸಹೋದರಿಯರೇ ಎಂದು ಸಂಬೋಧಿಸುವ ಮೂಲಕ ಇಡೀ ವಿಶ್ವಕ್ಕೆ ಭ್ರಾತೃತ್ವದ ಪಾಠ ಬೋಧಿಸಿದರು.

ಜಿ.ಪಂ. ಸಿಇಓ ಆರ್. ಸ್ನೇಹಲ್ ಮಾತನಾಡಿ, ಇಲ್ಲಿಯ ಕರ್ನಾಟಕ ಕಾಲೇಜು ತನ್ನ ಶೈಕ್ಷಣಿಕ ಉತ್ಕೃಷ್ಟತೆಗೆ ಹೆಸರಾಗಿದೆ.ಇಲ್ಲಿ ಅಧ್ಯಯನ ಮಾಡಿದವರು ಮಹಾನ್ ಸಾಧನೆ ಮಾಡಿದ್ದಾರೆ. ಅಂತಹ ಪವಿತ್ರ ಸ್ಥಳದಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳು ಆ ಹಿರಿಯರ ಹಾದಿಯನ್ನು ಮುಂದುವರೆಸಿಕೊಂಡು ಹೋಗಬೇಕು ಎಂದರು.

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯು ಸ್ವಾಮಿ ವಿವೇಕಾನಂದರ ಜನ್ಮ ದಿನೋತ್ಸವದ ಅಂಗವಾಗಿ ಹೊರತಂದಿರುವ ಕಿರುಪುಸ್ತಕವನ್ನು ಇದೇ ಸಂದರ್ಭದಲ್ಲಿ ಬಿಡುಗಡೆಗೊಳಿಸಲಾಯಿತು. ಕಾಲೇಜಿನ ಉಪಪ್ರಾಚಾರ್ಯೆ ಡಾ. ರಾಜೇಶ್ವರಿ ಮಹೇಶ್ವರಯ್ಯ ಅಧ್ಯಕ್ಷತೆ ವಹಿಸಿದ್ದರು. ವಕೀಲರ ಸಂಘದ ಅಧ್ಯಕ್ಷ ವಿ.ಡಿ.ಕಾಮರಡ್ಡಿ, ಬಿ.ಎಸ್.ಸಂಗಟಿ, ಪ್ರಫುಲ್ಲಾ ನಾಯಕ್, ವಾರ್ತಾ ಇಲಾಖೆ ಹಿರಿಯ ಸಹಾಯಕ ನಿರ್ದೇಶಕ ಮಂಜುನಾಥ ಡೊಳ್ಳಿನ, ಸುಚೇತಾ ನೆಲವಗಿ, ಪುರಾಣಿಕಮಠ, ಎಸ್.ಎನ್. ಹೆಗ್ಡೆ, ಡಾ.ಬಿ.ಎಸ್.ಭಜಂತ್ರಿ ಇದ್ದರು.

_ಲಕ್ಷ್ಮೀ(6ನೇ ಸೆಮಿಸ್ಟರ್)

## ಪ್ರೋ. ಮಹೇಶ್ವರ ಶಾಸ್ತ್ರಿ ವಿಧಿವಶ



ಕರ್ನಾಟಕ ಕಲಾ ಮಹಾವಿದ್ಯಾಲಯದ ಸಂಸ್ಕೃತ ವಿಭಾಗದ ನಿವೃತ್ತ ಪ್ರಾಧ್ಯಾಪಕರಾದ ಪ್ರೋ. ಮಹೇಶ್ವರ ಶಾಸ್ತ್ರಿ ಜೋಶಿ ದಿನಾಂಕ 22–1–2017ರ ಮಧ್ಯರಾತ್ರಿಯಂದು ನಿಧನರಾದ ಹಿನ್ನಲೆಯಲ್ಲಿ ಕರ್ನಾಟಕ ಕಲಾ ಮಹಾವಿದ್ಯಾಲಯದ ಶಿಕ್ಷಕ–ಶಿಕ್ಷಕೇತರ ಮತ್ತು ವಿದ್ಯಾರ್ಥಿಗಳು ಎರಡು ನಿಮಿಷ ಮೌನ ಆಚರಿಸಿ ಅವರಿಗೆ ಸಂತಾಪ ಸೂಚಕವಾಗಿ ಗೌರವ ಸಲ್ಲಿಸಲಾಯಿತು. ಈ ಸಂದರ್ಭದಲ್ಲಿ ಕರ್ನಾಟಕ ಕಲಾ ಮಹಾವಿದ್ಯಾಲಯದ ಪ್ರಾಚಾರ್ಯರಾದ ಡಾ. ಎಸ್. ಎಸ್. ಕಟ್ಟಿಮನಿ ಮಾತನಾಡಿ ಅವರೊಬ್ಬ ಸಂಸ್ಕೃತ ವಿದ್ವಾಂಸರಾಗಿದ್ದು, ಮಹಾವಿದ್ಯಾಲಯದ ಅತ್ಯಂತ ಹಿರಿಯ ಪ್ರಾಧ್ಯಾಪಕರಾಗಿದ್ದ ಅವರು ಅನೇಕ ವಿದ್ಯಾರ್ಥಿ ಬಳಗವನ್ನು ಅಗಲಿದ್ದಾರೆ ಎಂದ ಅವರು ಅವರ ಆತ್ಮಕ್ಕೆ ಪರಮಾತ್ಮನು ಶಾಂತಿ ನೀಡಲಿ ಅವರನ್ನು ಕಳೆದುಕೂಂಡ ಅವರ ಕುಟುಂಬಕ್ಕೆ ದೇವರು ಸಹಿಸುವ ಶಕ್ತಿ ನೀಡಲಿ ಎಂದು ಸಂತಾಪ ಸೂಚಕ ನುಡಿಗಳನ್ನಾಡಿದರು. ಪ್ರಾಧ್ಯಾಪಕ ಮತ್ತು ಮಹೇಶ್ವರ ಜೋಶಿ ಅವರ ವಿದ್ಯಾರ್ಥಿ ನಿಕಟವರ್ತಿ ಡಾ. ಅಮೃತ ಯಾರ್ದಿ ಪ್ರೋ.ಮಹೇಶ್ವರ ಜೋಶಿಯ ಕುರಿತ ಒಡನಾಟ ಮತ್ತು ಅವರ ಸಂಸ್ಕೃತ ಬೋಧನಾ ಶೈಲಿ ಕುರಿತು ತಮ್ಮ ಅಭಿಪ್ರಾಯಗಳನ್ನು ಹಂಚಿಕೊಂಡರು ಈ ಸಂದರ್ಭದಲ್ಲಿ ಮಹಾವಿದ್ಯಾಲಯದ ಪ್ರಾಧ್ಯಾಪಕರಾದ ಡಾ.ಮುಕುಂದ ಲಮಾಣಿ, ಡಾ.ಬಿ.ಎಸ್ ಭಜಂತ್ರಿ, ಡಾ.ವಾಯ್.ಎಸ್ ರಾವುತ್, ಪ್ರೊ ಹೊನ್ನಪ್ಪ ಡಾ.ಸ್ಟೆಲ್ಲಾ ಸ್ಟೀವನ್ ಡಾ.ಡಿ.ಬಿ. ಕರಡೋಣಿ, ಪ್ರೋಶಾರದಾ, ವಿರೇಂದ್ರ ಯಾದವ, ಪ್ರೊ. ಕೀರ್ತಿ, ಡಾ.ರಜನಿ, ಪ್ರೊ.ಎಸ್.ಸಿ.ಕುರಹಟ್ಟಿ, ಪ್ರೋ ಜಾಧವ ಅವರು ಸಂತಾಪ ಸೂಚಕ ಸಭೆಯಲ್ಲಿ ಭಾಗವಹಿಸಿದ್ದರು.

ಗೌರವ ಸಂಪಾದಕರು: ಡಾ. ಎಸ್.ಎಸ್.ಕಟ್ಟಿಮನಿ, ಸಂಚಿಕೆ ಸಂಪಾದಕರು: ಡಾ. ಪ್ರಭಾಕರ್ ಕಾಂಬಳೆ, ಡಾ.ಈಶ್ವರ್ ಗೌಡ ಪಾಟೀಲ್, ವಿದ್ಯಾರ್ಥಿ ಸಂಪಾದಕರು: ಸುನೀಲ, ಸ್ವಾತಿ,ನಿತಿನ್. ಪುಟ ವಿನ್ಯಾಸ: ಶ್ರೀಹರಿ.